ರಾಣಿ ಚನ್ನಮ್ಮ ವಿಶ್ವವಿದ್ಯಾಲಯ

ವಿದ್ಯಾಸಂಗಮ, ರಾಷ್ಟ್ರೀಯ ಹೆದ್ದಾರಿ– 04, ಭೂತರಾಮನಹಟ್ಟಿ, ಬೆಳಗಾವಿ – 591156
(ನ್ಯಾಕ್ ಮಾನ್ಯತೆ B+ ಗ್ರೇಡ್– 2021) PM-USHA (MERU)

57ನೇ ಸಾಮಾನ್ಯ ವಿದ್ಯಾವಿಷಯಕ್ ಪರಿಷತ್ ಸಭೆ ಹಾಗೂ 2026–27ನೇ ಶೈಕ್ಷಣಿಕ ಸಾಲಿನ 1ನೇ ಸಭೆಯ ನಡಾವಳಿಗಳು

ದಿನಾಂಕ : ಶುಕ್ರವಾರ, 12–06–2026
ಸಮಯ : ಪೂರ್ವಾಹ್ನ 11 : 00 ಘಂಟೆ
ಸ್ಥಳ : ಕುವೆಂಪು ಸಭಾಂಗಣ
ರಾಣಿ ಚನ್ನಮ್ಮ ವಿಶ್ವವಿದ್ಯಾಲಯ
ಬೆಳಗಾವಿ.

ರಾಣಿ ಚನ್ನಮ್ಮ ವಿಶ್ವವಿದ್ಯಾಲಯ

ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ **ವಿದ್ಯಾವಿಷಯಕ್ ಪರಿಷತ್ತಿನ 53ನೇ ಸಾಮಾನ್ಯ ಸಭೆಯ ಹಾಗೂ 2026-27ನೇ** ಸಾಲಿನ **1ನೇ ಸಭೆಯು** ದಿನಾಂಕ **12 ಜೂನ್ 2026** ರಂದು **ಪೂರ್ವಾಹ್ನ 11.00** ಘಂಟೆಗೆ ಹಾಜರಿದ್ದ/ಹಾಜರಾಗದ ಸದಸ್ಯರುಗಳ ವಿವರ.

I. ಹಾಜರಿದ್ದ ಸದಸ್ಯರು

1.	**ಪ್ರೊ. ಸಿ. ಎಂ. ತ್ಯಾಗರಾಜ**	**ಕುಲಪತಿಗಳು ಹಾಗೂ ಅಧ್ಯಕ್ಷರು**
2.	ಡಾ. ತಳವಾರ್ ಸಾಬಣ್ಣ, ವಿಧಾನ ಪರಿಷತ್ತಿನ ಶಾಸಕರು	ಸದಸ್ಯರು
3.	ಶ್ರೀ ಶಿವಕುಮಾರ ವ್ಹಿ. ಪರಾಂಡೆ	ಸದಸ್ಯರು
4.	ಶ್ರೀ ಆರ್. ಎಂ. ದೇವರೆಡ್ಡಿ	ಸದಸ್ಯರು
5.	ಶ್ರೀ ಜಗದೀಶ ಜೋಡಂಗಿ	ಸದಸ್ಯರು
6.	ಶ್ರೀ ಎಸ್. ಎ. ದೇಶಮುಖ	ಸದಸ್ಯರು
7.	ಶ್ರೀ ವಿಲಾಸ ಎನ್ ಕಾಂಬಳೆ	ಸದಸ್ಯರು
8.	ಪ್ರೊ. ಎಸ್. ಎಂ. ಸಜ್ಜನ	ಸದಸ್ಯರು
9.	ಶ್ರೀ ಲಕ್ಷ್ಮಣ ಎಸ್ ಬಡಿಗೇರ	ಸದಸ್ಯರು
10.	ಡಾ. ನೀಲಪ್ಪ ಹೊಸಮನಿ	ಸದಸ್ಯರು
11.	ಡಾ. ಎಂ. ಮಹೇಶ	ಸದಸ್ಯರು
12.	ಶ್ರೀಮತಿ(ಡಾ) ಸುನೀತಾ ಅಂಗಡಿ	ಸದಸ್ಯರು
13.	ಪ್ರೊ. ಆರ್. ಎನ್. ಮನಗೂಳಿ	ಸದಸ್ಯರು
14.	ಪ್ರೊ. ಅಶೋಕ ಡಿ' ಸೋಜಾ	ಸದಸ್ಯರು
15.	ಪ್ರೊ. ಶಿವಾನಂದ ಗೋರನಾಳೆ	ಸದಸ್ಯರು
16.	ಪ್ರೊ. ಬಿ. ಎಸ್. ನಾವಿ	ಸದಸ್ಯರು
17.	ಪ್ರೊ. ಜೆ. ಮಂಜಣ್ಣ	ಸದಸ್ಯರು
18.	ಡಾ. ಸುಷ್ಮಾ.ಆರ್.	ಸದಸ್ಯರು
19.	ಪ್ರೊ. ಸಿ. ಎನ್. ವಾಘಮಾರೆ	ಸದಸ್ಯರು
20.	ಪ್ರೊ. ವಿಶ್ವನಾಥ ಅವಟಿ.	ಸದಸ್ಯರು
21.	ಡಾ. ಎಸ್ ಸಿ. ಪಾಟೀಲ್	ಸದಸ್ಯರು
22.	ಪ್ರೊ. ವಿಶ್ವನಾಥ ಅವಟಿ. **(ನಿರ್ದೇಶಕರು, (ಯೋ.ಮೇ.ಮೌ ಮಂಡಳಿ)**	ಸದಸ್ಯರು
23.	ಪ್ರೊ. ಜೆ. ಮಂಜಣ್ಣ **(ನಿರ್ದೇಶಕರು, ಸಿ.ಡಿ.ಸಿ. ವಿಭಾಗ)**	ಸದಸ್ಯರು
24.	ಪ್ರೊ. ವಾಯ್. ಎಸ್. ಬಲವಂತಗೋಳ **(ವಿದ್ಯಾರ್ಥಿ ಕಲ್ಯಾಣ)**	ಸದಸ್ಯರು
25.	ಶ್ರೀಮತಿ ಸಪ್ನ ಎಂ.ಎ. **(ಹಣಕಾಸು ಅಧಿಕಾರಿಗಳು)**	ಸದಸ್ಯರು
26.	ಪ್ರೊ. ಡಿ. ಎಸ್. ಪಾಟೀಲ್, **ಕುಲಸಚಿವರು(ಮೌಲ್ಯಮಾಪನ)**	ಸದಸ್ಯರು
27.	ಶ್ರೀ ಸಂತೋಷ ಕಾಮಗೌಡ ಕೆ.ಎ.ಎಸ್.	**ಕುಲಸಚಿವರು ಹಾಗೂ ಸದಸ್ಯ ಕಾರ್ಯದರ್ಶಿಗಳು**

II. ಹಾಜರಾಗದ ಸದಸ್ಯರು

1.	ಜಂಟಿ ನಿರ್ದೇಶಕರು, ಕಾಲೇಜು ಶಿಕ್ಷಣ ಇಲಾಖೆ	ಸದಸ್ಯರು
2.	ನಿರ್ದೇಶಕರು, ತಾಂತ್ರಿಕ ಶಿಕ್ಷಣ ನಿರ್ದೇಶನಾಲಯ	ಸದಸ್ಯರು
3.	ಶ್ರೀ ಗಣೇಶ ಪ್ರಕಾಶ ಹುಕ್ಕೇರಿ, ಮಾನ್ಯ ವಿಧಾನಸಭಾ ಸದಸ್ಯರು	ಸದಸ್ಯರು
4.	ಶ್ರೀ ಬಿ.ಬಿ. ಚಿಮ್ಮನಕಟ್ಟಿ, ಮಾನ್ಯ ವಿಧಾನಸಭಾ ಸದಸ್ಯರು	ಸದಸ್ಯರು
5.	ಶ್ರೀ ಅಶೋಕ ಮಲ್ಲಪ್ಪ ಮನಗೂಳಿ, ಮಾನ್ಯ ವಿಧಾನಸಭಾ ಸದಸ್ಯರು	ಸದಸ್ಯರು
6.	ಶ್ರೀ. ಪ್ರದೀಪ ಶೆಟ್ಟರ್, ಸನ್ಮಾನ್ಯ ವಿಧಾನ ಪರಿಷತ್ ಸದಸ್ಯರು	ಸದಸ್ಯರು

ರಾಣಿ ಚನ್ನಮ್ಮ ವಿಶ್ವವಿದ್ಯಾಲಯ

ವಿದ್ಯಾಸಂಗಮ, ಬೆಂಗಳೂರು-ಪೂನಾ ರಾ.ಹೆ.-4, ಬೆಳಗಾವಿ-591156

ವಿದ್ಯಾವಿಷಯಕ್ ಪರಿಷತ್ ಪ್ರಾಧಿಕಾರ ಸಭೆಯ ನಡುವಳಿಗಳು

ವಿಷಯ: ದಿನಾಂಕ: 12.06.2026 ರಂದು ಕುವೆಂಪು ಸಭಾಂಗಣ, ರಾಚವಿವಿ, ಬೆಳಗಾವಿಯಲ್ಲಿ ಜರುಗಿದ 53ನೇ ಹಾಗೂ 2026-27 ನೇ ಶೈಕ್ಷಣಿಕ ಸಾಲಿನ 1ನೇ ಸಾಮಾನ್ಯ ವಿದ್ಯಾವಿಷಯಕ್ ಪರಿಷತ್ ಪ್ರಾಧಿಕಾರ ಸಭೆಯ ನಡುವಳಿಗಳು.

ಉಲ್ಲೇಖ: 1. ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಅಧಿನಿಯಮ 2000 ಪ್ರಕರಣ (30)(2) ಮತ್ತು 31.
2. ಮಾನ್ಯ ಕುಲಪತಿಗಳು ಸಭೆ ನಡೆಸಲು ನೀಡಿದ ಅನುಮೋದನೆ ದಿನಾಂಕ: 29.05.2026.
3.ಸಾಮಾನ್ಯ ವಿದ್ಯಾವಿಷಯಕ್ ಪರಿಷತ್ ಪ್ರಾಧಿಕಾರ ಸಭೆ ನೋಟಿಸ್ ದಿನಾಂಕ: 29.05.2026.

ಪ್ರಸ್ತಾವನೆ:

ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಅಧಿನಿಯಮ 2000 ಪ್ರಕರಣ (30)(2)(31)ರ ಅನುಗುಣವಾಗಿ ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ 53 ನೇ ಸಾಮಾನ್ಯ ವಿದ್ಯಾವಿಷಯಕ್ ಪರಿಷತ್ತಿನ ಸಭೆಯನ್ನು ದಿನಾಂಕ: 12.06.2026 ರಂದು ಪೂರ್ವಾಹ್ನ 11.00 ಘಂಟೆಗೆ ಕುವೆಂಪು ಸಭಾಂಗಣ, ರಾಚವಿ, ಬೆಳಗಾವಿ ಇಲ್ಲಿ ಆಯೋಜನೆ ಮಾಡಲಾಗಿತ್ತು. ಪ್ರಾಂಶುಪಾಲರ ಗುಂಪಿನಿಂದ ಸದಸ್ಯರಾಗಿ ನೇಮಕಗೊಂಡಿರುವ ಶ್ರೀಮತಿ(ಡಾ) ಸುನೀತಾ ಅಂಗಡಿ ಇವರಿಗೆ ಹೂಗುಚ್ಛವನ್ನು ನೀಡುವುದರ ಮೂಲಕ ಸಭೆಗೆ ಬರಮಾಡಿಕೊಳ್ಳಲಾಯಿತು. ತದನಂತರ ಕುಲಸಚಿವರು ಸಭೆಗೆ ಆಗಮಿಸಿದ ಸಭೆಯ ಅಧ್ಯಕ್ಷರು, ವಿಧಾನ ಪರಿಷತ್ ಸದಸ್ಯರಾದ ಪ್ರೊ ಸಾಬಣ್ಣ ತಳವಾರ ಮತ್ತು ಎಲ್ಲ ಸದಸ್ಯರುಗಳನ್ನು ಸ್ವಾಗತಿಸಿದರು.

ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ವ್ಯಾಪ್ತಿಯಲ್ಲಿ ಬರುವ ವಿವಿಧ ಸಂಯೋಜಿತ ಮಹಾವಿದ್ಯಾಲಯಗಳಲ್ಲಿ ಅಧ್ಯಯನ ನಡೆಸುತ್ತಿರುವ ಒಟ್ಟು 42 ವಿದ್ಯಾರ್ಥಿಗಳು ಕ್ಯಾಂಪಸ್ ಪ್ಲೇಸ್‌ಮೆಂಟ್ ಮೂಲಕ ಪ್ರತಿಷ್ಠಿತ ಕಂಪನಿಗಳಲ್ಲಿ ಉದ್ಯೋಗ ಪಡೆದುಕೊಂಡಿದ್ದು, ಸದರಿ ವಿಶೇಷ ಆಹ್ವಾನಿತ ವಿದ್ಯಾರ್ಥಿಗಳಿಗೆ ವಿದ್ಯಾವಿಷಯಕ್ ಪರಿಷತ್ ಸಭೆಯಲ್ಲಿ ನೇಮಕಾತಿ ಆದೇಶ ವಿತರಿಸಿ ಸನ್ಮಾನಿಸಲಾಯಿತು. ಪ್ರತಿಷ್ಠಿತ ಕಂಪನಿಯಲ್ಲಿ ಕ್ಯಾಂಪಸ್ ಪ್ಲೇಸ್‌ಮೆಂಟ್ ನಲ್ಲಿ ಯಶಸ್ವಿಯಾಗಿ ಆಯ್ಕೆಯಾಗಿರುವುದಕ್ಕೆ ಓರ್ವ ವಿದ್ಯಾರ್ಥಿನಿಯು ಸಂತಸ ವ್ಯಕ್ತಪಡಿಸಿ, ಈ ಯಶಸ್ಸಿನ ಹಿಂದೆ ಪೋಷಕರ ಪ್ರೋತ್ಸಾಹ, ಶಿಕ್ಷಕರ ಮಾರ್ಗದರ್ಶನ ಹಾಗೂ ರಾಣಿ ಚನ್ನಮ್ಮ ವಿಶ್ವವಿದ್ಯಾಲಯವು ದೇಶಪಾಂಡೆ ಫೌಂಡೇಶನ ಇವರ ಸಹಯೋಗದೊಂದಿಗೆ RCU-FESMA ಮೂಲಕ ಆಯೋಜಿಸಿದ ಕೌಶಲ್ಯಾಭಿವೃದ್ಧಿ, ವ್ಯಕ್ತಿತ್ವ ವಿಕಸನ, ಸಂವಹನ ಕೌಶಲ್ಯ ಮತ್ತು ಸಂದರ್ಶನ ಸಿದ್ಧತೆ ಕುರಿತಾಗಿ ನೀಡಿದ ತರಬೇತಿಗಳು ಪ್ರಮುಖ ಕಾರಣವಾಗಿವೆ ಎಂದು ಸಭೆಗೆ ತಿಳಿಸಿದರು. RCU-FESMA ಮೂಲಕ ವಿವಿಧ ಮಹಾವಿದ್ಯಾಲಯಗಳಲ್ಲಿ ಕೌಶಲ್ಯಾಭಿವೃದ್ಧಿ ತರಬೇತಿ ನೀಡಲು ಪ್ರಮುಖ ಪಾತ್ರವಹಿಸಿದ ದೇಶಪಾಂಡೆ ಫೌಂಡೇಶನ ಸಿಬ್ಬಂದಿಗಳು ಮತ್ತು ವಿಶ್ವವಿದ್ಯಾಲಯದ ಸಿಬ್ಬಂದಿ ಶ್ರೀ ವಿಕ್ರಮ್ ಮಿರ್ಜಿ ಇವರುಗಳಿಗೆ ಗೌರವಿಸಲಾಯಿತು.

ಪ್ರಾಸ್ತಾವಿಕವಾಗಿ ಮಾತನಾಡಿದ ಮಾನ್ಯ ಕುಲಪತಿಗಳು, ಪ್ರತಿಷ್ಠಿತ ಕಂಪನಿಗಳಲ್ಲಿ ಉದ್ಯೋಗ ದೊರಕಿಸಿಕೊಂಡ ವಿದ್ಯಾರ್ಥಿಗಳಿಗೆ ಅಭಿನಂದನೆ ತಿಳಿಸಿ, ಜೀವನದಲ್ಲಿ ಯಶಸ್ಸು ಸಾಧಿಸಲು ಪ್ರಾಮಾಣಿಕತೆ, ಶಿಸ್ತು, ಸಮಯಪಾಲನೆ ನಿರಂತರ ಕಲಿಕೆ ಹಾಗೂ ಮಾನವೀಯ ಮೌಲ್ಯಗಳನ್ನು ಅಳವಡಿಸಿಕೊಳ್ಳಲು ಸಂದೇಶ ನೀಡಿದರು ಹಾಗೂ ರಾಷ್ಟ್ರ-ಅಂತರಾಷ್ಟ್ರೀಯ ಮಟ್ಟದಲ್ಲಿ ಕೃತಕ ಬುದ್ಧಿಮತ್ತೆ (Artificial Intelligence - AI) ತಂತ್ರಜ್ಞಾನವು ಅತ್ಯಂತ ವೇಗವಾಗಿ ಬೆಳೆಯುತ್ತಿದ್ದು, ಶಿಕ್ಷಣ ಕ್ಷೇತ್ರದಲ್ಲಿ ಹೊಸ ಕ್ರಾಂತಿಯನ್ನು ಉಂಟು ಮಾಡುತ್ತಿದೆ. ಕಾರಣ, ಮುಂದಿನ ದಿನಗಳಲ್ಲಿ ವಿಶ್ವವಿದ್ಯಾಲಯದಲ್ಲಿಯು ಕೂಡ AI ಬೋಧನಾ ನೇಮಕಾತಿ ಮಾಡಿಕೊಳ್ಳಲು ಚಿಂತನೆ ನಡೆಸಲಾಗುತ್ತಿದೆ. ಶಿಕ್ಷಕರು ಕೂಡ ಬೋಧನೆಯ ಗುಣಮಟ್ಟದಲ್ಲಿ ಸುಧಾರಣೆ ತರಲು ಹಾಗೂ ತಂತ್ರಜ್ಞಾನದ ಕಲಿಕೆಗೆ ಹೆಚ್ಚಿನ ಆದ್ಯತೆ ನೀಡಲು ಕರೆ ನೀಡಿದರು. ಶಿಕ್ಷಕರಿಗೆ ಪ್ರೋತ್ಸಾಹಿಸುವ ದೃಷ್ಟಿಯಿಂದ ವಿಶ್ವವಿದ್ಯಾಲಯದ ಬೋಧಕ ಸಿಬ್ಬಂದಿಗಳಾದ ಪ್ರೊ. ಜೆ. ಮಂಜಣ್ಣ ಪ್ರಾಧ್ಯಾಪಕರು, ರಸಾಯನಶಾಸ್ತ್ರ ವಿಭಾಗ ಮತ್ತು ಡಾ. ನಂದಿನಿ ದೇವರಮನಿ, ಸಹ ಪ್ರಾಧ್ಯಾಪಕರು, ಅಪರಾಧಶಾಸ್ತ್ರ ಮತ್ತು ವಿಧಿವಿಜ್ಞಾನ ವಿಭಾಗ ಇವರುಗಳಿಗೆ ಸಂಶೋಧನೆಗಾಗಿ ಶೈಕ್ಷಣಿಕ ಪ್ರವಾಸ ಕೈಗೊಳ್ಳಲು South Wales ವಿಶ್ವವಿದ್ಯಾಲಯ, ಇಂಗ್ಲೆಂಡ್ ಮತ್ತು ಕಾರ್ಡಿಫ್ ವಿಶ್ವವಿದ್ಯಾಲಯ, ಇಂಗ್ಲೆಂಡ ಇಲ್ಲಿಗೆ ತೆರಳಲು ಅನುಮತಿ ನೀಡಲಾಗಿರುವ ವಿಷಯವನ್ನು ಸಭೆಗೆ ತಿಳಿಸಿದರು.

ತದನಂತರ ಕುಲಸಚಿವರು ಈ ಕೆಳಕಾಣಿಸಿದಂತೆ ವಿಷಯಸೂಚಿಗಳನ್ನು ಪ್ರಸ್ತಾಪಿಸಿದರು.

ಕ್ರ.ಸಂ	ಸಂಖ್ಯೆ	ಕಾರ್ಯಸೂಚಿ ವಿವರ ಹಾಗೂ ಕೈಗೊಂಡ ತೀರ್ಮಾನಗಳು
01	2026/06/01	ಹಿಂದಿನ ಸಭೆಗಳ ಗೊತ್ತುವಳಿಗಳನ್ನು ಹಾಗೂ ಅನುಪಾಲನಾ ವರದಿಗಳನ್ನು ದೃಢೀಕರಣಕ್ಕಾಗಿ ಸಭೆಯಲ್ಲಿ ಮಂಡಿಸುವುದು.
	ತೀರ್ಮಾನ	**ದಿನಾಂಕ: 28.03.2026 ರಂದು ನಡೆದ ವಿದ್ಯಾವಿಷಯಕ್ ಪರಿಷತ್ತಿನ ಸಾಮಾನ್ಯ ಸಭೆಯ ಗೊತ್ತುವಳಿಗಳ ಅನುಪಾಲನಾ ವರದಿಗಳನ್ನು ಸಭೆಯು ಪರಿಶೀಲಿಸಿ ದೃಢೀಕರಿಸಿತು.**
02	2026/06/02	2026-27ನೇ ಶೈಕ್ಷಣಿಕ ಸಾಲಿನ ಸ್ನಾತಕೋತ್ತರ ವಿಭಾಗಗಳ ಪ್ರವೇಶಾತಿ ಕುರಿತು.
	ತೀರ್ಮಾನ	**ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ 2026-27 ನೇ ಶೈಕ್ಷಣಿಕ ಸಾಲಿನ ಸ್ನಾತಕೋತ್ತರ ವಿಭಾಗಗಳ ಪ್ರವೇಶಾತಿಗೆ ಸಂಬಂಧಿಸಿದಂತೆ ಈ ಕೆಳಕಾಣಿಸಿದಂತೆ ಸಭೆಯು ಅನುಮೋದನೆ ನೀಡಿತು.** **1. 2026-27ನೇ ಶೈಕ್ಷಣಿಕ ಸಾಲಿನ ಸ್ನಾತಕೋತ್ತರ ಪ್ರವೇಶಾತಿ ಅರ್ಜಿಗಳನ್ನು 2026 ರ ಜುಲೈ ತಿಂಗಳಲ್ಲಿ ಹಾಗೂ ಪ್ರವೇಶ ಪ್ರಕ್ರಿಯೆಯನ್ನು ಆಗಸ್ಟ್ ತಿಂಗಳಲ್ಲಿ ಜರುಗಿಸಲು ಸಭೆಯು ಅನುಮೋದನೆ ನೀಡಿತು.** **2. 2026-27 ನೇ ಶೈಕ್ಷಣಿಕ ಸಾಲಿನಿಂದ ಈ ಕೆಳಗಿನ ಪಟ್ಟಿಯಲ್ಲಿ ಕಾಣಿಸಿದಂತೆ ಸ್ನಾತಕೋತ್ತರ ಕೋರ್ಸ್‌ಗಳನ್ನು ಜರುಗಿಸಲು ಸಭೆಯು ಅನುಮೋದನೆ ನೀಡಿತು.**

ಸಂ	ಕೋರ್ಸುಗಳು	ಕೋರ್ಸ್ ಜರುಗುವ ಸ್ಥಳಗಳು
01	ವಾಣಿಜ್ಯಶಾಸ್ತ್ರ, ಅರ್ಥಶಾಸ್ತ್ರ, ರಾಜ್ಯಶಾಸ್ತ್ರ, ಸಮಾಜಶಾಸ್ತ್ರ, ಇತಿಹಾಸ ಮತ್ತು ಪ್ರಾಚ್ಯಶಾಸ್ತ್ರ, ಸಮಾಜಕಾರ್ಯ ಹಾಗೂ ಪತ್ರಿಕೊದ್ಯಮ ಮತ್ತು ಸಮೂಹ ಸಂವಹನ	ವಿದ್ಯಾಸಂಗಮ, ಮುಖ್ಯ ಆವರಣ, ಭೂತರಾಮನಹಟ್ಟಿ
02	ಭೌತಶಾಸ್ತ್ರ, ರಸಾಯನಶಾಸ್ತ್ರ, ಗಣಿತಶಾಸ್ತ್ರ, ಪ್ರಾಣಿಶಾಸ್ತ್ರ, ಸಸ್ಯಶಾಸ್ತ್ರ, ಭೂಗೋಳಶಾಸ್ತ್ರ, ಗಣಕವಿಜ್ಞಾನ, ಅಪರಾಧಶಾಸ್ತ್ರ ಮತ್ತು ವಿಧಿ ವಿಜ್ಞಾನ, ಗ್ರಂಥಾಲಯ ಮತ್ತು ಮಾಹಿತಿ ವಿಜ್ಞಾನ	ವಿಜ್ಞಾನ ಸಂಗಮ, ನೂತನ ಆವರಣ, ಹಿರೇಬಾಗೇವಾಡಿ
03	ಕನ್ನಡ ಮತ್ತು ಇಂಗ್ಲೀಷ	ಸಂಗೊಳ್ಳಿ ರಾಯಣ್ಣ ಪ್ರಥಮ ದರ್ಜೆ ಕಲಾ ಮಹಾವಿದ್ಯಾಲಯ, ಬೆಳಗಾವಿ
04	ಮರಾಠಿ	ರಾಣಿ ಪಾರ್ವತಿ ದೇವಿ ಮಹಾವಿದ್ಯಾಲಯ, ಬೆಳಗಾವಿ.
05	ಕನ್ನಡ, ಇಂಗ್ಲೀಷ, ಇತಿಹಾಸ, ಸಮಾಜಕಾರ್ಯ, ವಾಣಿಜ್ಯಶಾಸ್ತ್ರ, ಗಣಿತಶಾಸ್ತ್ರ, ರಾಜ್ಯಶಾಸ್ತ್ರ, ಅರ್ಥಶಾಸ್ತ್ರ ಮತ್ತು ಉರ್ದು	ಸ್ನಾತಕೋತ್ತರ ಕೇಂದ್ರ, ತೋರವಿ, ವಿಜಯಪುರ.

3. ಎಮ್. ಇಡಿ(M.Ed) ಕೋರ್ಸಿಗೆ ಬಿ.ಇಡಿ(B.Ed) ನ ಅಂತಿಮ ಸೆಮೆಸ್ಟರ್ ಫಲಿತಾಂಶ ಬಂದ ನಂತರ ಪ್ರವೇಶ ಜರುಗಿಸಲು ಸಭೆಯು ಅನುಮೋದನೆ ನೀಡಿತು.
4. MBA and MCA ಕೋರ್ಸ್‌ಗಳನ್ನು ಕರ್ನಾಟಕ ಪರೀಕ್ಷಾ ಪ್ರಾಧಿಕಾರ ನೀಡುವ ಪ್ರವೇಶ ದಿನಾಂಕಗಳಂತೆ ಜರುಗಿಸಲು ಸಭೆಯು ಅನುಮೋದನೆ ನೀಡಿತು.
5. ಸ್ನಾತಕೋತ್ತರ ಕೇಂದ್ರ, ವಿಜಯಪುರದಲ್ಲಿಯ ಕನ್ನಡ, ಇಂಗ್ಲೀಷ, ಇತಿಹಾಸ, ಸಮಾಜಕಾರ್ಯ, ವಾಣಿಜ್ಯಶಾಸ್ತ್ರ, ಗಣಿತಶಾಸ್ತ್ರ, ರಾಜ್ಯಶಾಸ್ತ್ರ, ಅರ್ಥಶಾಸ್ತ್ರ ಮತ್ತು ಉರ್ದು ಕೋರ್ಸ್‌ಗಳ ಅಧ್ಯಯನದಲ್ಲಿ ಆಸಕ್ತವಿರುವ ವಿದ್ಯಾರ್ಥಿಗಳಿಗೆ ಸ್ನಾತಕೋತ್ತರ ಕೇಂದ್ರ, ವಿಜಯಪುರದಲ್ಲಿಯೇ ಪ್ರವೇಶ ಪ್ರಕ್ರಿಯೆಯನ್ನು ಕೈಗೊಳ್ಳಲು ಅನುಮೋದನೆ ನೀಡಿತು.
6. ವಿಶ್ವವಿದ್ಯಾಲಯದ ಮುಖ್ಯ ಆವರಣ, ಸ್ನಾತಕೋತ್ತರ ಕೇಂದ್ರ, ಸಂಯೋಜಿತ ಮಹಾವಿದ್ಯಾಲಯಗಳು, ಸ್ವಾಯತ್ತ ಮಹಾವಿದ್ಯಾಲಯಗಳಿಗೆ 2025-26 ನೇ ಸಾಲಿನಲ್ಲಿ ಸ್ನಾತಕೋತ್ತರ ಪ್ರವೇಶ ಪ್ರಕ್ರಿಯೆಗೆ ಅಳವಡಿಸಿಕೊಂಡಿರುವ ಪ್ರವೇಶ ಶುಲ್ಕಗಳಿಗೆ ಶೇ. 5 ರಷ್ಟು ಹೆಚ್ಚಿಸಿ ಪ್ರಸ್ತುತ ಸಾಲಿನಲ್ಲಿ ಅಳವಡಿಸಿಕೊಳ್ಳಲು ಸಭೆಯು ಅನುಮೋದಿಸಿತು.
7. 2025-26ನೇ ಸಾಲಿನ ಪ್ರಥಮ ವರ್ಷದ ವಿದ್ಯಾರ್ಥಿಗಳಿಗೆ ಅಳವಡಿಸಿರುವ ಪ್ರವೇಶ ಶುಲ್ಕಗಳನ್ನು ಯಥಾವತ್ತಾಗಿ 2026-27 ನೇ ಸಾಲಿನಲ್ಲಿ ಬರುವ(2025-26) ದ್ವಿತೀಯ ವರ್ಷದ ವಿದ್ಯಾರ್ಥಿಗಳಿಗೆ ಅಳವಡಿಸಿಕೊಳ್ಳಲು ಅನುಮೋದಿಸಿತು.

		8. ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ 02 ಸ್ನೇಹಿಮ 2026, ಬೆಂಗಳೂರು, ದಿನಾಂಕ: 13.05.2026 ರಂದು 400 ರೋಸ್ಟರ್ ಬಿಂದುಗಳಂತೆ, 2026-27ನೇ ಶೈಕ್ಷಣಿಕ ಸಾಲಿನ ಸ್ನಾತಕೋತ್ತರ ಪ್ರವೇಶ ಪ್ರಕ್ರಿಯೆಯ ಸೀಟು ಹಂಚಿಕೆ ಪಟ್ಟಿಯನ್ನು ಸಿದ್ಧಪಡಿಸಿಕೊಳ್ಳಲು ಅನುಮತಿ ನೀಡಿತು. **9. ಸದಸ್ಯರಾದ ಪ್ರೊ. ಸಿ. ಎನ್. ವಾಘಮಾರೆ, ಪ್ರಾಧ್ಯಾಪಕರು, ಮರಾಠಿ ವಿಭಾಗ ಇವರು ಸ್ನಾತಕೋತ್ತರ ಕೇಂದ್ರ, ವಿಜಯಪುರದಲ್ಲಿ ಮರಾಠಿ ವಿಭಾಗವನ್ನು ಪ್ರಾರಂಭಿಸಲು ಸಲಹೆ ನೀಡಿದ ಹಿನ್ನೆಲೆಯಲ್ಲಿ, 2026-27ನೇ ಶೈಕ್ಷಣಿಕ ಸಾಲಿನಿಂದ ಸ್ನಾತಕೋತ್ತರ ಮರಾಠಿ ವಿಭಾಗವನ್ನು ಸ್ನಾತಕೋತ್ತರ ಕೇಂದ್ರ, ವಿಜಯಪುರದಲ್ಲಿ ಆರಂಭಿಸಲು ಸಭೆಯು ತೀರ್ಮಾನಿಸಿತು.** **10. ಸ್ನಾತಕೋತ್ತರ ಕೇಂದ್ರ, ವಿಜಯಪುರದಲ್ಲಿ ವಿವಿಧ ವಿಭಾಗಗಳನ್ನು ಪ್ರಾರಂಭಿಸಲು ನಿರ್ಧರಿಸಿರುವುದರಿಂದ ವಿಶ್ವವಿದ್ಯಾಲಯದ ಬೋಧಕ ಸಿಬ್ಬಂದಿಗಳ "ವರ್ಗಾವಣೆ ನೀತಿ"(Transfer Policy) ರೂಪಿಸಲು ಸಭೆಯು ತೀರ್ಮಾನಿಸಿತು.**
03	2026/06/03	ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ಅಧೀನದ ಸಂಗೊಳ್ಳಿ ರಾಯಣ್ಣ ಪ್ರಥಮ ದರ್ಜೆ ಘಟಕ ಮಹಾವಿದ್ಯಾಲಯದಲ್ಲಿ ಉರ್ದು, ಮರಾಠಿ ಮತ್ತು DSC ಮಾನವಶಾಸ್ತ್ರ ವಿಷಯವನ್ನು ಪ್ರಾರಂಭಿಸುವ ಕುರಿತು.
	ತೀರ್ಮಾನ	**ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ಅಧೀನ ಸಂಗೊಳ್ಳಿ ರಾಯಣ್ಣ ಪ್ರಥಮ ದರ್ಜೆ ಘಟಕ ಮಹಾವಿದ್ಯಾಲಯದಲ್ಲಿ ಹಿಂದಿ, ಉರ್ದು, ಮರಾಠಿ ಮತ್ತು ಕಲಾ ವಿಭಾಗಕ್ಕೆ ಮಾತ್ರ DSC ಮಾನವಶಾಸ್ತ್ರ ವಿಷಯವನ್ನು ತಾತ್ಕಾಲಿಕವಾಗಿ ಒಂದು ವರ್ಷದ ಅವಧಿಗೆ ವಿಶ್ವವಿದ್ಯಾಲಯದ ಸ್ವಂತ ನಿಧಿಯಲ್ಲಿ ಯಾವುದೇ ಹುದ್ದೆಗಳ ಬೇಡಿಕೆಗಳನ್ನು ಸರ್ಕಾರಕ್ಕೆ ಸಲ್ಲಿಸದೇ ಇರುವ ಷರತ್ತಿಗೆ ಒಳಪಡಿಸಿ ಪ್ರಾರಂಭಿಸಲು ಸಭೆಯು ಅನುಮೋದನೆ ನೀಡಿತು.**
04	2026/06/04	ರಾಣಿ ಚನ್ನಮ್ಮ ವಿಶ್ವವಿದ್ಯಾಲಯದಲ್ಲಿ 2024-25ನೇ ಸಾಲಿನಲ್ಲಿ ಜಾರಿಗೊಳಿಸಲಾಗಿರುವ ಸ್ನಾತಕ ನೂತನ ಪಠ್ಯಕ್ರಮದ(SEP) 5ನೇ ಹಾಗೂ 6ನೇ ಸೆಮೆಸ್ಟರ್‌ಗಳ ಪಠ್ಯಕ್ರಮಗಳನ್ನು ಹಾಗೂ ಬಿ.ಕಾಂ AEDP ಪಠ್ಯಕ್ರಮಗಳನ್ನು ಅನುಮೋದಿಸುವ ಕುರಿತು.
	ತೀರ್ಮಾನ	**ರಾಣಿ ಚನ್ನಮ್ಮ ವಿಶ್ವವಿದ್ಯಾಲಯದಲ್ಲಿ 2024-25ನೇ ಶೈಕ್ಷಣಿಕ ಸಾಲಿನಿಂದ ಜಾರಿಗೊಳಿಸಲಾದ ಸ್ನಾತಕ ನೂತನ ಪಠ್ಯಕ್ರಮದ(SEP) 5ನೇ ಹಾಗೂ 6ನೇ ಸೆಮೆಸ್ಟರ್‌ಗಳ ಪಠ್ಯಕ್ರಮಗಳನ್ನು ಹಾಗೂ ಬಿ.ಕಾಂ AEDP (2026-27) ಪಠ್ಯಕ್ರಮಗಳನ್ನು ಸಭೆಯು ಪರಿಶೀಲಿಸಿ ಅನುಮೋದನೆ ನೀಡಿತು.**
05	2026/06/05	ರಾಣಿ ಚನ್ನಮ್ಮ ವಿಶ್ವವಿದ್ಯಾಲಯದಲ್ಲಿ 2026-27ನೇ ಶೈಕ್ಷಣಿಕ ಸಾಲಿನಲ್ಲಿ ಜಾರಿಗೊಳಿಸಲಾಗಿರುವ ಸ್ನಾತಕ ನೂತನ ಪಠ್ಯಕ್ರಮದಲ್ಲಿ(SEP) Employability Skills ವಿಷಯವನ್ನು ಅಳವಡಿಸುವ ಕುರಿತು

	ತೀರ್ಮಾನ	ರಾಣಿ ಚನ್ನಮ್ಮ ವಿಶ್ವವಿದ್ಯಾಲಯದಲ್ಲಿ 2026-27ನೇ ಶೈಕ್ಷಣಿಕ ಸಾಲಿನಿಂದ ವಿಶ್ವವಿದ್ಯಾಲಯದ ಸ್ನಾತಕ ವಿದ್ಯಾರ್ಥಿಗಳಿಗೆ ಎಲ್ಲ ರೀತಿಯ ಸ್ಪರ್ಧಾತ್ಮಕ ಪರೀಕ್ಷೆಗಳಲ್ಲಿ ಉತ್ತೀರ್ಣರಾಗಲು ಸಾಮರ್ಥ್ಯ ಹಾಗೂ ಅರ್ಹತೆಯನ್ನು ಹೆಚ್ಚಿಸಲು ಸ್ನಾತಕ ಎಲ್ಲ ಸೆಮೆಸ್ಟರ್‌ಗಳಿಗೆ 3 ಕ್ರೆಡಿಟ್ Employability Skill ವಿಷಯವನ್ನು ಕಡ್ಡಾಯವಾಗಿ 2026-27 ನೇ ಶೈಕ್ಷಣಿಕ ಸಾಲಿನಿಂದ ಪ್ರಾರಂಭಿಸಲು ತೀರ್ಮಾನಿಸಲಾಯಿತು. ಈ ವಿಷಯವನ್ನು ವಿದ್ಯಾರ್ಥಿಗಳ E-vidya App ನಲ್ಲಿ ಲಭ್ಯವಿರುವ ಕಲಿಕಾ ಸಾಮಗ್ರಿಗಳಿಂದ(Study materials) ಪಡೆದು ಕಲಿತುಕೊಳ್ಳಬಹುದಾಗಿದೆ ಹಾಗೂ ಇದರ ಪರೀಕ್ಷೆಯನ್ನು ಇ-ಸ್ಪರ್ಧಾದಲ್ಲಿ ಆನ್‌ಲೈನ ಮೂಲಕ ನಡೆಸಲಾಗುತ್ತದೆ. ಸದರಿ ವಿಷಯದ ಕ್ರೆಡಿಟ್‌ಗಳನ್ನು ಅಂಕಪಟ್ಟಿಗಳ Course Structure ಹೊರತುಪಡಿಸಿ ಪ್ರತ್ಯೇಕವಾಗಿ ಅಂಕಗಳನ್ನು ನಮೂದಿಸಲು ಸಭೆಯು ತೀರ್ಮಾನಿಸಿತು.
06	2026/06/06	ರಾಣಿ ಚನ್ನಮ್ಮ ವಿಶ್ವವಿದ್ಯಾಲಯದಲ್ಲಿ SWAYAM/MOOCS ವಿಷಯಗಳನ್ನು ಅಳವಡಿಸುವ ಕುರಿತು.
	ತೀರ್ಮಾನ	ರಾಣಿ ಚನ್ನಮ್ಮ ವಿಶ್ವವಿದ್ಯಾಲಯದಲ್ಲಿ 2026-27ನೇ ಶೈಕ್ಷಣಿಕ ಸಾಲಿನಿಂದ ಎಲ್ಲ ಸ್ನಾತಕೋತ್ತರ ಅಧ್ಯಯನ ವಿಭಾಗಗಳು ಹಾಗೂ ಪಿಹೆಚ್.ಡಿ. ಪಠ್ಯಕ್ರಮದ ಜೊತೆಗೆ SWAYAM/MOOCS ಕೋರ್ಸ್‌ಗಳನ್ನು ಅಳವಡಿಸಿಕೊಳ್ಳಲು, MOOCS ಸಮಿತಿಯವರು ನೀಡಿರುವ ಶಿಫಾರಸ್ಸುಗಳನ್ನು ಅಂಗೀಕರಿಸಲು ಹಾಗೂ SWAYAM/MOOCS ನಿಯಮಾವಳಿಗಳನ್ನು ಪರಿಶೀಲಿಸಿ ವಿದ್ಯಾವಿಷಯಕ್ ಪರಿಷತ್ ಸಭೆಯು ಅನುಮೋದನೆ ನೀಡಿತು ಹಾಗೂ ಸದರಿ ವಿಷಯಕ್ಕೆ 2026-27 ನೇ ಶೈಕ್ಷಣಿಕ ಸಾಲಿನಿಂದ ಸ್ನಾತಕೋತ್ತರ ವಿಭಾಗಗಳು ಮತ್ತು ಪಿಹೆಚ್.ಡಿ. ಪದವಿಗೆ ರೂ. 1000/- ಗಳನ್ನು ನೇರವಾಗಿ SWAYAM/MOOCS Plat Form ಗೆ ಪಾವತಿಸಲು ಕಡ್ಡಾಯಗೊಳಿಸಲು ಮತ್ತು ಸಂಸ್ಕರಣಾ ಶುಲ್ಕ (Processing Fees) ರೂ. 250/- ಗಳನ್ನು ನಿಗದಿಪಡಿಸಲು ಸಭೆಯು ತೀರ್ಮಾನಿಸಿತು.
07	2026/06/07	2026-27 ನೇ ಶೈಕ್ಷಣಿಕ ಸಾಲಿನ ಸ್ನಾತಕ ಬಿ.ಇಡಿ/ಬಿ.ಪಿ.ಇಡಿ ಕೋರ್ಸಗಳ ಪ್ರವೇಶ ಶುಲ್ಕಗಳಿಗೆ ವಿದ್ಯಾವಿಷಯಕ್ ಪರಿಷತ್ ಸಭೆಯ ಅನುಮೋದನೆ ಕುರಿತು
	ತೀರ್ಮಾನ	2023-24 ನೇ ಸಾಲಿನಲ್ಲಿ ಸರಕಾರದ ಏಕರೂಪದ ಶುಲ್ಕವನ್ನು ಅಳವಡಿಸಿಕೊಳ್ಳಲಾಗಿದ್ದು, ಸದರಿ ಶುಲ್ಕಗಳನ್ನು ಪ್ರತಿ ವರ್ಷ 10% ಅಥವಾ ಎರಡು ವರ್ಷಗಳಿಗೆ 20% ರಿಂದ 25% ರಷ್ಟು ಹೆಚ್ಚಿಗೆ ಮಾಡಿ ಜಾರಿಗೆ ತರಬಹುದೆಂದು ಸೂಚಿಸಿದನ್ವಯ, ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ವ್ಯಾಪ್ತಿಗೆ ಒಳಪಡುವ ಬೆಳಗಾವಿ ಮತ್ತು ವಿಜಯಪುರ ಜಿಲ್ಲೆಗಳಲ್ಲಿ ಇರುವ ಎಲ್ಲ ಸಂಯೋಜಿತ ಶಿಕ್ಷಣ/ದೈಹಿಕ ಶಿಕ್ಷಣ ಮಹಾವಿದ್ಯಾಲಯಗಳಲ್ಲಿ ಸ್ನಾತಕ ಬಿ.ಇಡಿ/ಬಿ.ಪಿ.ಇಡಿ ಕೋರ್ಸಗಳಿಗೆ 2025-26ನೇ ಶೈಕ್ಷಣಿಕ ಸಾಲಿನ ಶುಲ್ಕಕ್ಕೆ 10% ರಷ್ಟು ಹೆಚ್ಚಿಸಿ, 2026-27ನೇ ಸಾಲಿನಿಂದ ಅಳವಡಿಸಲು ವಿದ್ಯಾವಿಷಯಕ್ ಪರಿಷತ್ ಸಭೆಯು ಅನುಮೋದನೆ ನೀಡಿತು.

08	2026/06/08	ವಿಶ್ವವಿದ್ಯಾಲಯದ ಸಂಯೋಜಿತ ಎಲ್ಲ ಸರ್ಕಾರಿ, ಖಾಸಗಿ, ಅನುದಾನಿತ ಮಹಾವಿದ್ಯಾಲಯಗಳಲ್ಲಿ ಪ್ರವೇಶ ಮಿತಿ ಕುರಿತು.
	ತೀರ್ಮಾನ	**ವಿಶ್ವವಿದ್ಯಾಲಯದ ಸಂಯೋಜಿತ ಎಲ್ಲ ಸರ್ಕಾರಿ, ಖಾಸಗಿ, ಅನುದಾನಿತ, ಮಹಾವಿದ್ಯಾಲಯಗಳಲ್ಲಿ ಕಾಲೇಜು ತಾಂತ್ರಿಕ ಶಿಕ್ಷಣ ಇಲಾಖೆ, ಬೆಂಗಳೂರು ದಿನಾಂಕ: 13.10.2022 ರ ಸುತ್ತೋಲೆ ಹಾಗೂ ಸರ್ಕಾರದ ಆದೇಶ ಸಂಖ್ಯೆ: ಇಡಿ 102 ಯು ಎನ್ ಇ 2009 ಬೆಂಗಳೂರು ದಿನಾಂಕ: 04.06.2009 ರ ಅನ್ವಯ ಕಾಲೇಜುಗಳಲ್ಲಿ ಪ್ರಸ್ತುತ ಲಭ್ಯವಿರುವ ಕೊರ್ ವಿಷಯ (Discipline Specific Core Subject-DSC) ಗಳಿಗೆ ಕನಿಷ್ಠ 15 ವಿದ್ಯಾರ್ಥಿಗಳು ಪ್ರವೇಶ ಪಡೆಯುವುದು ಕಡ್ಡಾಯವಾಗಿರುತ್ತದೆ ಹಾಗೂ ಪತ್ರ ಸಂಖ್ಯೆ: ಕಾಶಿಇ/44/ಅ.ಉ.ನೇ/2012-13/ನೇಪಾವಿ-1 ದಿನಾಂಕ: 10.07.2013 ರ ಅನ್ವಯ ಬಿ.ಎಸ್ಸಿ, ಬಿ.ಸಿ.ಎ ಹಾಗೂ ಭಾಷಾ ಐಚ್ಛಿಕ ವಿಷಯಗಳಲ್ಲಿ ಕನಿಷ್ಠ 10 ವಿದ್ಯಾರ್ಥಿಗಳು ಕಡ್ಡಾಯವಾಗಿರುತ್ತದೆ.** **ಮುಂದುವರೆದು, ಸದರಿ ಮೇಲಿನ ಆದೇಶಗಳನ್ನು ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ಸಂಯೋಜಿತ ಎಲ್ಲ ಸರ್ಕಾರಿ, ಖಾಸಗಿ, ಅನುದಾನಿತ, ಅನುದಾನರಹಿತ ಹಾಗೂ ಸ್ವಾಯತ್ತ ಮಹಾವಿದ್ಯಾಲಯಗಳಲ್ಲಿ ಪ್ರತಿ ಪಾಲಿಸುತ್ತ ಬಂದಿದ್ದು 2026-27 ನೇ ಶೈಕ್ಷಣಿಕ ಸಾಲಿಗೆ ಮುಂದುವರೆಸಲು ಸಭೆಯು ಅನುಮೋದನೆ ನೀಡಿತು.**
09	2026/06/09	ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ಸ್ನಾತಕ ಹಾಗೂ ಸ್ನಾತಕೋತ್ತರ ವಿದ್ಯಾರ್ಥಿ/ವಿದ್ಯಾರ್ಥಿನಿಯರು ಆಕಸ್ಮಿಕ ಅಪಘಾತಕ್ಕೆ ಒಳಗಾದರೆ ಅಥವಾ ಅಕಾಲಿಕವಾಗಿ ಮರಣವನ್ನು ಹೊಂದಿದರೆ ಅವರಿಗೆ ಹಣಕಾಸಿನ ನೆರವು ನೀಡುವ ಕುರಿತು.
	ತೀರ್ಮಾನ	**ರಾಣಿ ಚನ್ನಮ್ಮ ವಿಶ್ವವಿದ್ಯಾಲಯದಲ್ಲಿ ಪ್ರಸ್ತುತ ಶೈಕ್ಷಣಿಕ ಸಾಲಿನಲ್ಲಿ ವ್ಯಾಸಾಂಗ ಮಾಡುತ್ತಿರುವ ಸ್ನಾತಕ ಹಾಗೂ ಸ್ನಾತಕೋತ್ತರ ವಿದ್ಯಾರ್ಥಿಗಳು ಅನಿರೀಕ್ಷಿತ ಅಪಘಾತ, ದುರ್ಘಟನೆ, ದುರ್ಮರಣ ಸಂಭವಿಸಿದರೆ ಅಥವಾ ತೀವ್ರ ಕಾಯಿಲೆಗೆ ಒಳಗಾದರೆ ಅವರಿಗೆ 2026-27 ನೇ ಶೈಕ್ಷಣಿಕ ಸಾಲಿನಿಂದ ಜಾರಿಗೆ ಬರುವಂತೆ ವಿಶ್ವವಿದ್ಯಾಲಯದ "Ordinance Governing Student Health and Safety Insurance Policy of Rani Channamma University Belagavi" ರ ಪ್ರಕಾರ ಇಲ್ಲಿಯವರೆಗೆ ಸಂಗ್ರಹಿಸಿರುವ ಮತ್ತು ಮುಂದೆ ಸಂಗ್ರಹಿಸಲಿರುವ Student Insurance ಶುಲ್ಕ ಮೊತ್ತವನ್ನು ವಿಶ್ವವಿದ್ಯಾಲಯದಲ್ಲಿ "ವಿದ್ಯಾರ್ಥಿ ವಿಮಾ ನಿಧಿ" ಎಂದು ತೇವಣಿಕರಿಸಿ ಅದರಿಂದ ಬರುವ ಬಡ್ಡಿಯ ಮೊತ್ತದಿಂದ ಹಣಕಾಸಿನ ನೆರವು ನೀಡಲು ಹಾಗೂ ಸಂಬಂಧಿಸಿದ ಅಧ್ಯಾದೇಶ(Ordinance) ಹೊರಡಿಸಲು ಸಭೆಯು ಅನುಮೋದನೆ ನೀಡಿತು.**
10	2026/06/10	2026-27 ನೇ ಶೈಕ್ಷಣಿಕ ಸಾಲಿನಲ್ಲಿ ಸ್ನಾತಕೋತ್ತರ ಇತಿಹಾಸ ವಿಭಾಗದಲ್ಲಿ ಇನ್ನೊಂದು Specialization ಪತ್ರಿಕೆಯನ್ನು ಪ್ರಾರಂಭಿಸಲು ವಿದ್ಯಾವಿಷಯಕ್ ಪರಿಷತ್ ಸಭೆ ಮಂಡಿಸಿರುವ ಕುರಿತು.

	ತೀರ್ಮಾನ	ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ಇತಿಹಾಸ ವಿಭಾಗದಲ್ಲಿ ಮುಖ್ಯ ಆವರಣದ Specialization ವಿಷಯವಾಗಿ ಈಗಾಗಲೇ SOCIO-RELIGIOUS MOVEMENTS IN KARNATAKA (MEDIVEVAL AND MODERN) ಅನ್ನು ಪಠ್ಯಕ್ರಮದಲ್ಲಿ ಅಳವಡಿಸಲಾಗಿರುತ್ತದೆ. ಇದೀಗ ಸದರಿ Specialization ಜೊತೆ ಸ್ನಾತಕೋತ್ತರ ಕೇಂದ್ರ, ವಿಜಯಪುರದಲ್ಲಿ ನಡೆಯುತ್ತಿರುವ Specialization ವಿಷಯವಾದ PRINCIPLES AND METHOD OF ARCHEOLOGY Specialization ಅನ್ನು ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ಮುಖ್ಯ ಆವರಣದ ಇತಿಹಾಸ ವಿಭಾಗದಲ್ಲಿ 2026-27 ನೇ ಸಾಲಿನಿಂದ ಪ್ರಾರಂಭಿಸಲು ಸಭೆಯು ಅನುಮೋದನೆ ನೀಡಿತು.
11	2026/06/11	ಪರೀಕ್ಷಾ ಮೌಲ್ಯಮಾಪನ ಕಾರ್ಯವನ್ನು Digital Evaluation ಮುಖಾಂತರ ಜಾರಿಗೊಳಿಸುವ ಕುರಿತು
	ತೀರ್ಮಾನ	ಪರೀಕ್ಷಾ ಉತ್ತರ ಪತ್ರಿಕೆಗಳ ಮೌಲ್ಯಮಾಪನವನ್ನು ಹೆಚ್ಚು ಪಾರದರ್ಶಕ, ನಿಖರ ಮತ್ತು ತ್ವರಿತವಾಗಿ ಕೈಗೊಳ್ಳಲು ರಾಣಿ ಚನ್ನಮ್ಮ ವಿಶ್ವವಿದ್ಯಾಲಯದಲ್ಲಿ 2026-27 ನೇ ಶೈಕ್ಷಣಿಕ ಸಾಲಿನಿಂದ ಸ್ನಾತಕ ಮತ್ತು ಸ್ನಾತಕೋತ್ತರ ಪರೀಕ್ಷಾ ಮೌಲ್ಯಮಾಪನ ಕಾರ್ಯವನ್ನು Digital Evaluation ಮುಖಾಂತರ ಜಾರಿಗೊಳಿಸಲು KTPP ನಿಯಮಾವಳಿಗಳ ಪ್ರಕಾರ ಟೆಂಡರ್ ಆಹ್ವಾನಿಸಿ, ಟೆಂಡರ್ ಪ್ರಕ್ರಿಯೆ ಅಂತಿಮಗೊಂಡ ಬಳಿಕ Digital Evaluation ಕಾರ್ಯವನ್ನು ವಿಶ್ವವಿದ್ಯಾಲಯದಲ್ಲಿ ಅವಳಡಿಸಿಕೊಳ್ಳಲು ಸಭೆಯು ಅನುಮೋದನೆ ನೀಡಿತು.
12	2026/06/12	AI ಆಧಾರಿತ ಪರೀಕ್ಷಾ ಮೌಲ್ಯಮಾಪನ ವ್ಯವಸ್ಥೆಯನ್ನು ಕೈಗೊಳ್ಳುವ ಕುರಿತು
	ತೀರ್ಮಾನ	ರಾಣಿ ಚನ್ನಮ್ಮ ವಿಶ್ವವಿದ್ಯಾಲಯದಲ್ಲಿ AI ಮೌಲ್ಯಮಾಪನ ಕುರಿತು ಪರೀಕ್ಷಿಸಲು, 2025-26ನೇ ಶೈಕ್ಷಣಿಕ ಸಾಲಿನ 1, 3 ಮತ್ತು 5 ನೇ ಸೆಮೆಸ್ಟರ್‌ನ ಮಾದರಿ ಮೌಲ್ಯಮಾಪನದ ಉತ್ತರ ಪತ್ರಿಕೆಗಳನ್ನು ಮ್ಯಾನುವಲ್ ಮುಖಾಂತರ/ಭೌತಿಕ ಮೌಲ್ಯಮಾಪನ ಮಾಡಿ ಫಲಿತಾಂಶ ಪ್ರಕಟಿಸಲು ಜೊತೆಗೆ ಪರೀಕ್ಷಾರ್ಥವಾಗಿ ಪರ್ಯಾಯ AI ಮೌಲ್ಯಮಾಪನ ತಂತ್ರಜ್ಞಾನದಿಂದ ಮೌಲ್ಯಮಾಪನ ಕಾರ್ಯವನ್ನು ಕೈಗೊಳ್ಳಲು ಹಾಗೂ ಎರಡೂ ವಿಧಗಳ ಮೌಲ್ಯಮಾಪನವನ್ನು ತಾಳೆ ಮಾಡಲು ಸಭೆಯು ಅನುಮೋದನೆ ನೀಡಿತು.
13	2026/06/13	Statue Governing Cadre, Recruitment and promotion of Non-Teaching Technical and Ministerial Staff in Kitturu Rani Channamma University, 2026 ಹಾಗೂ Statue Governing Rani Channamma University Employees Service(Conduct) Rule-2026 ಕರಡು ಪರನಿಯಮಗಳನ್ನು ಘನತೆವೆತ್ತ ಕುಲಾಧಿಪತಿಗಳ ಅನುಮೋದನೆಗಾಗಿ ಸಲ್ಲಿಸುವ ಕುರಿತು.
	ತೀರ್ಮಾನ	ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ಈ ಕೆಳಕಾಣಿಸಿದ ಪರಿನಿಯಮಗಳನ್ನು ಪರಿಶೀಲಿಸಿ ಘನತೆವೆತ್ತ ಕುಲಾಧಿಪತಿಗಳ ಅನುಮೋದನೆಗಾಗಿ ಕರ್ನಾಟಕ ಸರ್ಕಾರದ ಉನ್ನತ ಶಿಕ್ಷಣ ಇಲಾಖೆಗೆ ಕಳುಹಿಸಲು ಸಭೆಯು ಅನುಮೋದನೆ ನೀಡಿತು.

		ಸಂ	ಪರಿನಿಯಮಾವಳಿಯ ಹೆಸರು
		01	Statue Governing Cadre, Recruitment and promotion of Non-Teaching Technical and Ministerial Staff in Rani Channamma University, 2022
		02	Statue Governing Kitturu Rani Channamma University Emplyees Service(Conduct) Rule-2026
ಅಧ್ಯಕ್ಷರ ಅಪ್ಪಣೆ ಮೇರೆಗೆ ಇತರೇ ವಿಷಯಗಳು			
14	2026/06/I	ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ವಿದ್ಯಾವಿಷಯಕ್ ಪರಿಷತ್ ಸಭೆಗಳನ್ನು ಪ್ರತಿ ವರ್ಷ ಜೂನ್ ತಿಂಗಳಿಂದ ಮೊದಲನೇ ಸಭೆ ಎಂದು ಪರಿಗಣಿಸುವ ಕುರಿತು	
	ತೀರ್ಮಾನ	**ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ಪ್ರಾರಂಭದ ದಿನಗಳಿಂದ ಇಲ್ಲಿಯವರೆಗೆ ವಿದ್ಯಾವಿಷಯಕ್ ಪರಿಷತ್ ಸಭೆಗಳನ್ನು ಪ್ರತಿ ವರ್ಷ ಜನೇವರಿ ತಿಂಗಳಿನಲ್ಲಿ ಮೊದಲನೇ ಸಭೆ ಎಂದು ಪ್ರಾರಂಭಿಸಿ ಡಿಸೆಂಬರ್ ತಿಂಗಳಿನಲ್ಲಿ ಕೊನೆಯ ಸಭೆ ಎಂದು ಪರಿಗಣಿಸಲಾಗುತ್ತಿದೆ. ಸದರಿ ಸಭೆಗಳು ವಿದ್ಯಾಮಂಡಳ ವಿಭಾಗಕ್ಕೆ ಸಂಬಂಧಿತವಾಗಿರುವುದರಿಂದ ಹಾಗೂ ಪ್ರತಿ ವರ್ಷ ಸ್ನಾತಕ/ಸ್ನಾತಕೋತ್ತರ ಕೋರ್ಸಗಳ ಶೈಕ್ಷಣಿಕ ಚಟುವಟಿಗಕೆಗಳು ಜೂನ್ ತಿಂಗಳಿನಿಂದ ಪ್ರಾರಂಭವಾಗುವ ಹಿನ್ನೆಲೆಯಲ್ಲಿ, ಪ್ರಸಕ್ತ ಶೈಕ್ಷಣಿಕ ವರ್ಷದಿಂದ ಜೂನ್ ತಿಂಗಳಿನಲ್ಲಿ ಜರುಗುವ ವಿದ್ಯಾವಿಷಯಕ್ ಪರಿಷತ್ ಸಭೆಯನ್ನು 2026-27ನೇ ಶೈಕ್ಷಣಿಕ ಸಾಲಿನಿಂದ ಮೊದಲನೇ ಸಭೆ ಎಂದು ಪರಿಗಣಿಸಲು ಸಭೆಯು ತೀರ್ಮಾನಿಸಿತು.**
15	2026/06/II	ರಾಣಿ ಚನ್ನಮ್ಮ ವಿಶ್ವವಿದ್ಯಾಲಯದಲ್ಲಿ ಕರ್ನಾಟಕ ಸಾಂಸ್ಕೃತಿಕ ನಾಯಕ ಶ್ರೀ ಬಸವೇಶ್ವರ ಅಧ್ಯಯನ ಮತ್ತು ಸಂಶೋಧನಾ ಕೇಂದ್ರ ಪ್ರಾರಂಭಿಸುವ ವಿಷಯದ ಕುರಿತು.	
	ತೀರ್ಮಾನ	**ಬಸವಣ್ಣವರ "ಕಾಯಕವೇ ಕೈಲಾಸ ಮತ್ತು ಸಮಾನತೆ, ಸಹಭಾಳ್ವೆ ಮಾನವತೆ ತತ್ವಗಳನ್ನು ಯುವಜನರಲ್ಲಿ ಬೆಳೆಸಲು ರಾಣಿ ಚನ್ನಮ್ಮ ವಿಶ್ವವಿದ್ಯಾಲಯದಲ್ಲಿ ಶ್ರೀ ಬಸವೇಶ್ವರ ಅಧ್ಯಯನ ಮತ್ತು ಸಂಶೋಧನಾ ಕೇಂದ್ರ ಪ್ರಾರಂಭಿಸಲು ಸಭೆಯು ತೀರ್ಮಾನಿಸಿ ಸರ್ಕಾರಕ್ಕೆ ಅನುದಾನ ಬಿಡುಗಡೆಗೆ ಪ್ರಸ್ತಾವನೆ ಸಲ್ಲಿಸಲು ಅನುಮೋದನೆ ನೀಡಿತು.**
16	2026/06/III	ಸಂಗೊಳ್ಳಿ ರಾಯಣ್ಣ ಪ್ರಥಮ ದರ್ಜೆ ಘಟಕ ಮಹಾವಿದ್ಯಾಲಯದಲ್ಲಿ NCC ಘಟಕ ಪ್ರಾರಂಭ ಮಾಡುವ ಕುರಿತು	
	ತೀರ್ಮಾನ	**2025-26ನೇ ಸಾಲಿನಿಂದ ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ಸಂಗೊಳ್ಳಿ ರಾಯಣ್ಣ ಪ್ರಥಮ ದರ್ಜೆ ಘಟಕ ಮಹಾವಿದ್ಯಾಲಯದಲ್ಲಿ NCC ಘಟಕ ಪ್ರಾರಂಭಿಸಲಾಗಿದೆ. ಸದರಿ ವಿಷಯಕ್ಕೆ ವಿದ್ಯಾವಿಷಯಕ್ ಪರಿಷತ್ ಸಭೆಯು ಘಟನೋತ್ತರ ಅನುಮೋದನೆ ನೀಡಿತು.**
17	2026/06/IV	ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ವಿವಿಧ ಸಂಸ್ಥೆಗಳೊಂದಿಗೆ ಒಡಂಬಡಿಕೆ(MoU) ಕುರಿತು	

	ತೀರ್ಮಾನ	ರಾಣಿ ಚನ್ನಮ್ಮ ವಿಶ್ವವಿದ್ಯಾಲಯವು 2024-25 ರಿಂದ 2026-27 ನೇ ಸಾಲಿನ ಪರಿಷ್ಕೃತ ಈ ಕೆಳಕಾಣಿಸಿದಂತೆ ವಿವಿಧ ಸಂಸ್ಥೆಗಳೊಂದಿಗೆ ಒಡಂಬಡಿಕೆ(MoU) ಮಾಡಿಕೊಂಡಿರುತ್ತದೆ. ಸದರಿ ಒಡಂಬಡಿಕೆಗೆ ಸಭೆಯು ಘಟನೋತ್ತರ ಅನುಮತಿ ನೀಡಿತು.

Sl No	Organization Name	Date
01	The Principal, Jawaharlal Nehru Medical College (JNMC), Belagavi	26-08-2024
02	BAJAJ FINSERV LIMITED	09-11-2024
03	Director D Devaraj URS Research Institute, Bengaluru	04-01-2025
04	Power Grid Corporation of India	07-02-2025
05	Deshpande Foundations, Hubballi with Career Guidance, Training & Placement Cell	07-02-2025
06	Bridgewater State University, USA with RCU	12-02-2025
07	S Nijalingappa Sugar Institute Belagavi	18-02-2026
08	Universidad de Tarapaca, Arica- Chile with CCJ, RCU	11-03-2025
09	Laghu Udyog Bharati-Karnataka with DDUSC, IQAC, WEC	12-03-2025
10	Dopa Net Technologies Pvt. Ltd. In in domain of Wi-Fi Monetization with IT Cell	12-03-2025
11	Yoga University of Amricas, Florida, USA	25-03-2025
12	Air Force School of Physical Fitness C/o Airmen Training School, Indian Air Force	09-07-2025
13	Mentors for Kids Foundation	10-07-2025
14	IIIT Dharwad Research Park, Dharwad	16-07-2025
15	MoU executed between The University of Salford, Salford, M5 4WT, United Kingdom, and Rani Channamma University Belagavi – 591156, State of Karnataka, India.	13-10-2025
16	Spoken Tutorial, Edu Pyramids, SINE, IIT Bombay	18-10-2025
17	NASSCOM / IT-ITeS SECTOR SKILLS COUNCIL	09-06-2026

18	2026/06/V	ನಾಲ್ಕು ಆವೃತ್ತಿಯ MCQ ಪ್ರಶ್ನೆಪತ್ರಿಕೆಗಳನ್ನು ಮುದ್ರಿಸಿ ಪರೀಕ್ಷೆಗಳನ್ನು ನಡೆಸುವ ಕುರಿತು.
	ತೀರ್ಮಾನ	**ರಾಣಿ ಚನ್ನಮ್ಮ ವಿಶ್ವವಿದ್ಯಾಲಯದಲ್ಲಿ OMR ಆಧಾರಿತ MCQ Paper ಗಳ ಪರೀಕ್ಷೆಗಳನ್ನು ನಡೆಸುವ ಗುಣಮಟ್ಟವನ್ನು ಸುಧಾರಿಸಲು, ಸ್ಪರ್ಧಾತ್ಮಕ ಪರೀಕ್ಷೆಗಳಲ್ಲಿ ಅಳವಡಿಸಲಾಗುವ ಪ್ರಕಾರ ನಾಲ್ಕು ಆವೃತ್ತಿಯ/ಮಾದರಿಯ ಪ್ರಶ್ನೆ ಪತ್ರಿಕೆಗಳನ್ನು ಮುದ್ರಿಸಿ ಪರೀಕ್ಷೆಗಳನ್ನು ನಡೆಸಲು ಸಭೆಯು ತೀರ್ಮಾನಿಸಿತು.**
19	2026/06/VI	ಪಿಹೆಚ್.ಡಿ. ಸಂಶೋಧನಾರ್ಥಿಗಳು ಸಲ್ಲಿಸುವ ಮಹಾಪ್ರಬಂಧಗಳಲ್ಲಿ ನೂನ್ಯತೆಗಳಿರುವ ಬಗ್ಗೆ ಕೆಲವು ಮೌಲ್ಯಮಾಪಕರುಗಳು ಉಲ್ಲೇಖಿಸಿ, ಮೌಖಿಕ ಪರೀಕ್ಷೆಗೆ ಮತ್ತು ಮಹಾಪ್ರಬಂಧಗಳ ಪ್ರಕಟಣೆಗೆ ಶಿಫಾರಸ್ಸು ಮಾಡುತ್ತಿರುವ ಕುರಿತು.

	ತೀರ್ಮಾನ	**ಸಂಶೋಧನಾರ್ಥಿಗಳಿಂದ 04 ಮಹಾಪ್ರಬಂಧಗಳನ್ನು ಸ್ಪೈರಲ್ ಬೈಂಡಿಂಗ್‌ನಲ್ಲಿ ತೆಗೆದುಕೊಂಡು, ಮೌಲ್ಯಮಾಪಕರಿಗೆ ಮೌಲ್ಯಮಾಪನಕ್ಕೆ ಕಳುಹಿಸಲು ಹಾಗೂ ಮೌಲ್ಯಮಾಪಕರು ಮಹಾಪ್ರಬಂಧಗಳಲ್ಲಿ ನೂನ್ಯತೆಗಳನ್ನು ತಿಳಿಸಿದಲ್ಲಿ/ಬದಲಾವಣೆಗಳನ್ನು ಸೂಚಿಸಿದಲ್ಲಿ, ಅಂತಹ ಮಾಹಿತಿಯನ್ನು ಮಾರ್ಗದರ್ಶಕರ ಮೂಲಕ ಸಂಶೋಧನಾರ್ಥಿಗಳಿಗೆ ತಿಳಿಸಿ ಅಂತಿಮವಾಗಿ ನೂನ್ಯತೆಗಳನ್ನು ಸರಿಪಡಿಸಿದ/ಬದಲಾವಣೆಗಳನ್ನು ಒಳಗೊಂಡಂತಹ 04 ಮಹಾಪ್ರಬಂಧಗಳನ್ನು ಸಂಶೋಧನಾರ್ಥಿಗಳಿಂದ ಪಡೆದುಕೊಳ್ಳಲು ಸಭೆಯು ಅನುಮೋದನೆ ನೀಡಿತು.**
20	2026/03/VII	NEP ಪಠ್ಯಕ್ರಮದಡಿಯಲ್ಲಿ ಸ್ನಾತಕ ಕೋರ್ಸ್‌ಗಳನ್ನು ಓದುತ್ತಿರುವ ವಿದ್ಯಾರ್ಥಿಗಳು 6ನೇ ಸೆಮಿಸ್ಟರ್‌ಗೆ ಪರೀಕ್ಷಾ ಅರ್ಜಿಯನ್ನು ತುಂಬದೇ ಇರುವುದರಿಂದ ಮುಂಬರುವ ಪುನರಾವರ್ತಿತ ವಿದ್ಯಾರ್ಥಿಗಳಿಗೆ ನಡೆಸಲಾಗುವ ಪರೀಕ್ಷೆಗಳಿಗೆ ಅರ್ಜಿಯನ್ನು ತುಂಬಲು ಸಾಧ್ಯವಾಗದಿರುವ ಕುರಿತು.
	ತೀರ್ಮಾನ	**ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ಅಡಿಯಲ್ಲಿನ NEP ಪಠ್ಯಕ್ರಮದಡಿಯಲ್ಲಿ 1 ರಿಂದ 5 ನೇ ಸೆಮೆಸ್ಟರ್ ಪರೀಕ್ಷೆಗಳನ್ನು ಬರೆದು ಪ್ರಸ್ತುತ 6 ನೇ ಸೆಮೆಸ್ಟರ್‌ನಲ್ಲಿ ಓದುತ್ತಿರುವ ಕೆಲವು ವಿದ್ಯಾರ್ಥಿಗಳು ಕಾರಣಾಂತರಗಳಿಂದ 6ನೇ ಸೆಮೆಸ್ಟರ್ ಪರೀಕ್ಷೆಗೆ ಅರ್ಜಿಯನ್ನು ತುಂಬಿರುವುದಿಲ್ಲ. ಇಂತಹ ವಿದ್ಯಾರ್ಥಿಗಳು ನಿಯಮಾವಳಿಗಳನ್ವಯ ಮರು ಪ್ರವೇಶ ಪಡೆಯಬೇಕಾಗುತ್ತದೆ. ಆದರೆ, 2024-25 ನೇ ಶೈಕ್ಷಣಿಕ ಸಾಲಿನಲ್ಲಿ SEP ಪಠ್ಯಕ್ರಮ ಜಾರಿಯಲ್ಲಿರುವುದರಿಂದ ಅಂತಹ ವಿದ್ಯಾರ್ಥಿಗಳಿಗೆ NEP ಪಠ್ಯಕ್ರಮಡಿಯಲ್ಲಿನ ಕೋರ್ಸ್‌ಗಳಿಗೆ ಮರು ಪ್ರವೇಶ ನೀಡಲು ಅವಕಾಶವಿರುವುದಿಲ್ಲ. ಕಾರಣ, ಅಂತಹ ವಿದ್ಯಾರ್ಥಿಗಳಿಗೆ ಸಂಬಂಧಿಸಿದಂತೆ ಕೈಗೊಳ್ಳಬೇಕಾದ ಕ್ರಮಗಳ ಕುರಿತಾಗಿ ಸಭೆಯ ಮಾರ್ಗದರ್ಶನ ಕೋರಿದ ಹಿನ್ನೆಲೆಯಲ್ಲಿ, ಅಂತಹ ವಿದ್ಯಾರ್ಥಿಗಳ ಶೈಕ್ಷಣಿಕ ಹಿತದೃಷ್ಟಿಯಿಂದ ವಿಶೇಷ ಪ್ರಕರಣವೆಂದು ಪರಿಗಣಿಸಿ ಒಂದು ಬಾರಿಗೆ NEP ಪಠ್ಯಕ್ರಮದಡಿಯಲ್ಲಿ ಪರೀಕ್ಷೆ ಬರೆಯಲು ಅವಕಾಶ ಕಲ್ಪಿಸಲು ಸಭೆಯು ತೀರ್ಮಾನಿಸಿತು.**
21	2026/03/VIII	ಪಿಎಚ್.ಡಿ. ನಿಯಮಾವಳಿ 21.2 ರಲ್ಲಿ ತಿದ್ದುಪಡಿ ಮಾಡಿ ಪರಿಷ್ಕರಿಸಿದ ನಿಯಮಾವಳಿಯನ್ನು ವಿದ್ಯಾವಿಷಯಕ್ ಪರಿಷತ್ ಸಭೆಯ ಅನುಮೋದನೆಗಾಗಿ.
	ತೀರ್ಮಾನ	**ಪಿಎಚ್.ಡಿ. ನಿಯಮಾವಳಿ 21.2 ರಲ್ಲಿ ಈ ಕೆಳಕಾಣಿಸಿದಂತೆ ತಿದ್ದುಪಡಿ ಮಾಡಿ ಪರಿಷ್ಕರಿಸಲು ಸಭೆಯು ಅನುಮೋದನೆ ನೀಡಿತು.**

Existing 21.2 Rule	Revised 21.2 Rule
Besides, the candidate shall make, once in a year(preferably during the meeting of Doctoral	Besides, the candidate shall make, once in a year(preferably during the meeting of Doctoral Committee), presentation about the progress made by him/her during the

		Committee), presentation about the progress made by him/her during the last one year and also the work plan for the next one year.	last one year and also the work plan for the next one year. **Full-time scholar must submit at least five progress reports while part-time scholars must submit seven progress reports**
22	2026/03/IX	ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ಎಂ.ಬಿ.ಎ ಹಾಗೂ ಎಂ.ಸಿ.ಎ ವಿಭಾಗಗಳ ಪ್ರವೇಶ ಮಿತಿ(Intake) ಹೆಚ್ಚಿಸುವ ಕುರಿತು	
	ತೀರ್ಮಾನ	**ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ಎಂ.ಬಿ.ಎ ಹಾಗೂ ಎಂ.ಸಿ.ಎ ವಿಭಾಗಗಳಲ್ಲಿ ಪ್ರಸ್ತುತ ಜಾಲ್ತಿಯಲ್ಲಿರುವ ಪ್ರವೇಶ ಮಿತಿಗೆ ಹೆಚ್ಚುವರಿಯಾಗಿ ಶೇ. 20 ರಷ್ಟು ಸೀಟುಗಳನ್ನು ನಿಗದಿಪಡಿಸಲು ಸಭೆಯು ತೀರ್ಮಾನಿಸಿತು.**	
23	2026/03/X	ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ 2026-27 ನೇ ಶೈಕ್ಷಣಿಕ ಸಾಲಿನ ಸ್ನಾತಕೋತ್ತರ ಎಂ.ಬಿ.ಎ ಮತ್ತು ಎಂ.ಸಿ.ಎ ವಿಭಾಗಗಳ ಪ್ರವೇಶ ಪ್ರಕ್ರಿಯೆ ಪ್ರಾರಂಭಿಸುವ ಕುರಿತು	
	ತೀರ್ಮಾನ	**ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ 2026-27ನೇ ಶೈಕ್ಷಣಿಕ ಸಾಲಿನ ಎಂ.ಬಿ.ಎ ಮತ್ತು ಎಂ.ಸಿ.ಎ ವಿಭಾಗಗಳ ಪ್ರವೇಶಾತಿ ಪ್ರಕ್ರಿಯೆಯನ್ನು ಪ್ರಸ್ತುತ ಚಾಲ್ತಿಯಲ್ಲಿರುವ ಇತರೆ ಸ್ನಾತಕೋತ್ತರ ಕೋರ್ಸ್‌ಗಳ ಪ್ರವೇಶಾತಿ ಪ್ರಕ್ರಿಯೆಯೊಂದಿಗೆ ಪ್ರಾರಂಭಿಸಲು ಹಾಗೂ ತದನಂತರ KEA ಮೂಲಕ ಬರುವ ವಿದ್ಯಾರ್ಥಿಗಳ ಪ್ರವೇಶಾತಿ ಕೈಗೊಳ್ಳಲು ಸಭೆಯು ಅನುಮೋದನೆ ನೀಡಿತು.**	
24	2026/03/XI	Statue Governing KITTURU RANI CHANNAMMA UNIVERSITY EMPLOYEES CLASSIFICATION, CONTROL AND APPREAL RULES-2026 ಕರಡು ಪರಿನಿಯಮವನ್ನು ಘನತೆವೆತ್ತ ಕುಲಾಧಿಪತಿಗಳ ಅನುಮೋದನೆಗಾಗಿ ಉನ್ನತ ಶಿಕ್ಷಣ ಇಲಾಖೆಗೆ ಸಲ್ಲಿಸುವ ಕುರಿತು.	
	ತೀರ್ಮಾನ	**ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ಈ ಕೆಳಕಾಣಿಸಿದ ಪರಿನಿಯಮಗಳನ್ನು ಪರಿಶೀಲಿಸಿ ಘನತೆವೆತ್ತ ಕುಲಾಧಿಪತಿಗಳ ಅನುಮೋದನೆಗಾಗಿ ಕರ್ನಾಟಕ ಸರ್ಕಾರದ ಉನ್ನತ ಶಿಕ್ಷಣ ಇಲಾಖೆಗೆ ಕಳುಹಿಸಲು ಸಭೆಯು ಅನುಮೋದನೆ ನೀಡಿತು.**	

ಸಂ	ಪರಿನಿಯಮಾವಳಿಯ ಹೆಸರು
01	**Statue Governing KITTURU RANI CHANNAMMA UNIVERSITY EMPLOYEES CLASSIFICATION, CONTROL AND APPREAL RULES-2026**

ಕೊನೆಯದಾಗಿ, ವಂದನೆ ಸಲ್ಲಿಸಿ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

ಕುಲಸಚಿವರು ಹಾಗೂ ಸದಸ್ಯ ಕಾರ್ಯದರ್ಶಿಗಳು **ಕುಲಪತಿಗಳು ಹಾಗೂ ಅಧ್ಯಕ್ಷರು**

ಇವರಿಗೆ

ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ಎಲ್ಲ ಮಾನ್ಯ ವಿದ್ಯಾವಿಷಯಕ್ ಪರಿಷತ್ತಿನ ಸದಸ್ಯರುಗಳಿಗೆ

ಪ್ರತಿ ಮಾಹಿತಿಗಾಗಿ: ಹಣಕಾಸು ಅಧಿಕಾರಿಗಳು, ರಾಣಿ ಚನ್ನಮ್ಮ ವಿಶ್ವವಿದ್ಯಾಲಯ, ಬೆಳಗಾವಿ.

ರಾಣಿ ಚನ್ನಮ್ಮ ವಿಶ್ವವಿದ್ಯಾಲಯ
ವಿದ್ಯಾಸಂಗಮ, ರಾಷ್ಟ್ರೀಯ ಹೆದ್ದಾರಿ – 04, ಭೂತರಾಮನಹಟ್ಟಿ, ಬೆಳಗಾವಿ – 591156
(ನ್ಯಾಕ್ ಮಾನ್ಯತೆ B+ ಗ್ರೇಡ್– 2021)PM-USHA (MERU)
RANI CHANNAMMA UNIVERSITY
Vidyasangama, National Highway – 04, Bhootaramanahatti, Belagavi – 591156
(NAAC Accredited with B+ Grade – 2021) PM-USHA (MERU)
E-mail: registrar@rcub.ac.in
ಕುಲಸಚಿವರ ಕಾರ್ಯಾಲಯ
Office of the Registrar
Website: www.rcub.ac.in
Phone No.: 0831-2565234

ಕ್ರ.ಸಂ.: ರಾಚವಿಬೆ/ಕುಸಕಾ/ಜಿಎಡಿ/2026-27/ 1552

ದಿನಾಂಕ: 22 JUN 2026

ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ
ಎಲ್ಲಾ ವಿದ್ಯಾವಿಷಯಕ್ ಪರಿಷತ್ ಸದಸ್ಯರುಗಳಿಗೆ,

ಮಾನ್ಯರೆ,

ವಿಷಯ: ದಿನಾಂಕ: 12-06-2026 ರಂದು ಜರುಗಿದ ಸಾಮಾನ್ಯ ವಿದ್ಯಾವಿಷಯಕ್ ಪರಿಷತ್ ಸಭೆಯ ನಡಾವಳಿಯ ಪ್ರತಿಯನ್ನು ಕಳುಹಿಸುವ ಕುರಿತು.

ಉಲ್ಲೇಖ: ವಿದ್ಯಾವಿಷಯಕ್ ಪರಿಷತ್‌ಸಭೆ ನಡೆದ ದಿನಾಂಕ : 12-06-2026

ದಿನಾಂಕ : 12-06-2026 ರಂದು ಜರುಗಿದ ಸಾಮಾನ್ಯ ವಿದ್ಯಾವಿಷಯಕ್ ಪರಿಷತ್ ಸಭೆಯಲ್ಲಿ ಮಾಡಿರುವ ಚರ್ಚೆ ಮತ್ತು ಕೈಕೊಳ್ಳಲಾಗಿರುವ ನಿರ್ಣಯಗಳ ಪ್ರತಿಯನ್ನು ಈ ಮೂಲಕ ತಮ್ಮ ಅವಗಾಹನೆಗಾಗಿ ಮತ್ತು ಧೃಡೀಕರಣಕ್ಕಾಗಿ ಕಳಿಸುತ್ತಿದ್ದೇನೆ. ಇದರಲ್ಲಿರುವ ಯಾವುದೇ ವಿಷಯಗಳ ಬಗ್ಗೆ ತಮ್ಮ ಸಹಮತಿ ಇಲ್ಲದಿದ್ದಲ್ಲಿ ಲಿಖಿತವಾಗಿ ಅಗತ್ಯ ಟಿಪ್ಪಣಿಗಳೊಂದಿಗೆ ದಿನಾಂಕ : 29-06-2026ರ ಒಳಗೆ ವಿಶ್ವವಿದ್ಯಾಲಯಕ್ಕೆ ಇ-ಮೇಲ್ ಮುಖಾಂತರ ಸಲ್ಲಿಸಲು ಕೋರಿದೆ.

ಯಾವುದೇ ವಿಷಯದ ಅಸಹಮತಿಯ, ಲಿಖಿತ ಟಿಪ್ಪಣಿ ನಿಗಧಿತ ಸಮಯದಲ್ಲಿ ಸ್ವೀಕರಿಸದೇ ಇದ್ದಲ್ಲಿ, ಎಲ್ಲಾ ವಿಷಯಗಳಿಗೆ ತಮ್ಮ ಧೃಡೀಕರಣ ಇದೆಯೆಂದು ಭಾವಿಸಿ, ಮುಂದಿನ ಕ್ರಮ ಜರುಗಿಸಲಾಗುವುದು.

ವಂದನೆಗಳೊಂದಿಗೆ,

ತಮ್ಮ ವಿಶ್ವಾಸಿ,

ಸಂತೋಷ ಕಾಮಗೌಡ ಕ.ವಿ.ಎಸ್.
ಕುಲಸಚಿವರು

ಕುಲಸಚಿವರು
ರಾಣಿ ಚನ್ನಮ್ಮ ವಿಶ್ವವಿದ್ಯಾಲಯ
ಬೆಳಗಾವಿ